# ವಾಟ್ಸ್‌ಆ್ಯಪ್‌ನಲ್ಲಿ 'ಡಿಜಿ' ಸೇವೆ

ಜನರಿಗೆ ಬೆರಳತುದಿಯಲ್ಲಿ ದಾಖಲೆಗಳು ಲಭ್ಯವಾಗುವಂತೆ ಮಾಡುವ ಸಲುವಾಗಿ ಅಂದರೆ ಡಿಜಿಟಲ್ ರೂಪದಲ್ಲಿ ದಾಖಲೆಗಳನ್ನು ಸಂಗ್ರಹಿಸಿಕೊಳ್ಳಲು ಕೇಂದ್ರ ಸರ್ಕಾರವು 'ಡಿಜಿಲಾಕರ್' ಸೇವೆಯನ್ನು ಒದಗಿಸಿದೆ. ದಾಖಲಾತಿಗಳನ್ನು ಒದಗಿಸುವ ವ್ಯಾಪ್ತಿಯನ್ನು ಇನ್ನಷ್ಟು ಸರಳಗೊಳಿಸಿರುವ 'ಮೈಗೌ' ಇನ್ನುಮುಂದೆ ವಾಟ್ಸ್‌ಆ್ಯಪ್‌ನಲ್ಲೇ ಡಿಜಿಲಾಕರ್ ಸೇವೆಗಳನ್ನು ಪಡೆಯುವ ವ್ಯವಸ್ಥೆಯನ್ನು ಕಲ್ಪಿಸಿರುವುದಾಗಿ ಈಚೆಗೆ ಪ್ರಕಟಿಸಿದೆ. ಇದರೊಂದಿಗೆ 'ಕೋವಿನ್' ಸಂಬಂಧಿತ ದಾಖಲಾತಿಗಳನ್ನೂ ಪಡೆಯಬಹುದಾಗಿದೆ.

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಡಿಜಿಟಲ್ ಇಂಡಿಯಾ ಕಾರ್ಪೊರೇಷನ್ (ಡಿಐಸಿ) ಅಡಿ 2015ರಲ್ಲಿ ಡಿಜಿಲಾಕರ್ ಸೇವೆಯನ್ನು ಆರಂಭಿಸಿತು. ಇದೊಂದು ಡಿಜಿಟಲ್ ಪ್ಲಾಟ್‌ಫಾರ್ಮ್ ಆಗಿದ್ದು, ಇದರಲ್ಲಿ ಜನರು ತಮ್ಮ ಎಲೆಕ್ಟ್ರಾನಿಕ್ ದಾಖಲಾತಿಗಳು ಅಂದರೆ ಇ–ಡಾಕ್ಯುಮೆಂಟ್ಸ್ ಆದ ಆಧಾರ್, ಪಾನ್‌ಕಾರ್ಡ್‌ನಂತಹ ನಕಲನ್ನು ಇರಿಸಬಹುದು. ಇವು ಅಧಿಕೃತ ದಾಖಲಾತಿಗಳು. ಭೌತಿಕ ದಾಖಲಾತಿಗಳ ಬಳಕೆಯನ್ನು ಕಡಿತಗೊಳಿಸಬೇಕು ಹಾಗೂ ಎಲೆಕ್ಟ್ರಾನಿಕ್ ದಾಖಲಾತಿಗಳ ಸಂಗ್ರಹ ಉತ್ತೇಜಿಸಬೇಕು ಎಂಬ ಗುರಿಯೊಂದಿಗೆ ಈ ಸೇವೆಯನ್ನು ಪ್ರಾರಂಭಿಸಲಾಯಿತು.

ಡಿಜಿಲಾಕರ್ ಕಾರ್ಯವಿಧಾನವು ಯುಐಡಿಎಐ (ಆಧಾರ್) ಜೊತೆಗೆ ಕೈಜೋಡಿಸಿದ್ದು, ಆಧಾರ್ ಸಂಖ್ಯೆಯನ್ನು ಒಮ್ಮೆ ಇದರೊಂದಿಗೆ ಲಿಂಕ್ ಮಾಡಬೇಕಾಗುತ್ತದೆ. ಅದರ ಮೂಲಕ ಸರ್ಕಾರಿ ಸಂಸ್ಥೆಗಳಲ್ಲಿನ ಜನರ ವೈಯಕ್ತಿಕ ದಾಖಲಾತಿಗಳನ್ನು ಒದಗಿಸಲಾಗುತ್ತದೆ. ಇದು ಗೂಗಲ್ ಕ್ಲೌಡ್‌ನಲ್ಲಿ ಡೇಟಾ ಸಂಗ್ರಹಿಸಿ, ಹಂಚಿಕೊಳ್ಳುವ ವಿಧಾನದಂತೆ ಕಾರ್ಯಚರಿಸುತ್ತದೆ.

ಅಂಕಪಟ್ಟಿ, ಶೈಕ್ಷಣಿಕ ಪ್ರಮಾಣಪತ್ರಗಳು, ವಾಹನ ಪರವಾನಗಿ ಸೇರಿದಂತೆ ದೇಶದ ಜನರ ಅಧಿಕೃತ ವೈಯಕ್ತಿಕ ದಾಖಲೆಗಳನ್ನು ಕಾಪಿಟ್ಟುಕೊಳ್ಳುವ ವ್ಯವಸ್ಥೆಯನ್ನು ಡಿಜಿಲಾಕರ್ ಹೊಂದಿದೆ. ಯಾವುದೇ ಸ್ಥಳದಲ್ಲಿ ಸುಲಭವಾಗಿ ಆ್ಯಪ್ ಅಥವಾ ಡಿಜಿಲಾಕರ್ ವೆಬ್‌ಸೈಟ್ ಅನ್ನು ತೆರೆದು ತಮ್ಮ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅತ್ಯಂತ ಸುಲಭ ಪ್ರಕ್ರಿಯೆಯನ್ನು ಸಾರ್ವಜನಿಕರಿಗೆ ಒದಗಿಸಲಾಗಿದೆ.

ಡಿಜಿಲಾಕರ್‌ನಲ್ಲಿ ಸಂಗ್ರಹಿಸಿರುವ ಎಲ್ಲ ದಾಖಲೆಗಳನ್ನು ಅಧಿಕೃತವೆಂದು ಪರಿಗಣಿಸಲು ಕೇಂದ್ರ ಸರ್ಕಾರದ ಆದೇಶವಿದ್ದು, ಈ ದಾಖಲಾತಿಗಳನ್ನು ಅಲ್ಲಗೆಳೆಯುವಂತಿಲ್ಲ.




ಡಿಜಿಲಾಕರ್‌ನಲ್ಲಿ ಸಿಗುತ್ತಿದ್ದ ದಾಖಲಾತಿಗಳನ್ನು ಇನ್ನು ಮುಂದೆ ಜನರು ತಮ್ಮ ವಾಟ್ಸ್‌ಆ್ಯಪ್ ಖಾತೆಯಲ್ಲಿ ಪಡೆಯುವ ಅವಕಾಶವನ್ನು ಕಲ್ಪಿಸಲಾಗಿದೆ.

**■ ಶಶಿಕುಮಾರ್ ಸಿ.**

ಇಂತಹ ಸೇವೆಯನ್ನು ಇದೀಗ ವಾಟ್ಸ್‌ಆ್ಯಪ್‌ನಲ್ಲೇ ಪಡೆಯಲು ಅವಕಾಶ ಕಲ್ಪಿಸಿರುವುದು ಡಿಜಿಲಾಕರ್‌ಗಿಂತ ಸರಳವಾಗಿ ದಾಖಲಾತಿಗಳನ್ನು ಪಡೆಯಲು ಸಾರ್ವಜನಿಕರಿಗೆ ಸಾಧ್ಯವಾಗಲಿದೆ.

### ಇದು ಹೇಗೆ ಸಾಧ್ಯ?

ವಾಟ್ಸ್‌ಆ್ಯಪ್‌ನಲ್ಲಿ 'ಮೈಗೌ ಹೆಲ್ಪ್‌ಡೆಸ್ಕ್' ಸಂಖ್ಯೆಯನ್ನು ಸೇವ್ ಮಾಡಿಕೊಳ್ಳುವ ಮೂಲಕ ಈ ಸೇವೆಗಳನ್ನು ಪಡೆಯಬಹುದು. ಪಾನ್ ಕಾರ್ಡ್, ವಾಹನಗಳ ದಾಖಲೆಗಳು ಸೇರಿದಂತೆ ಡಿಜಿಲಾಕರ್ ಖಾತೆಯಲ್ಲಿ ಸಂಗ್ರಹಿಸಿರುವ ದಾಖಲೆಗಳನ್ನು ವಾಟ್ಸ್‌ಆ್ಯಪ್‌ನಲ್ಲೇ ಮನವಿ ಸಲ್ಲಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ವಾಟ್ಸ್‌ಆ್ಯಪ್ ಬಳಕೆದಾರರು ಮೈಗೌ ಚಾಟ್‌ಬಾಟ್ ಸಂಖ್ಯೆಗೆ ( +919013151515) ನಮಸ್ತೆ (Namaste) ಅಥವಾ ಹಾಯ್ (Hi) ಅಥವಾ ಡಿಜಿಲಾಕರ್ (Digilocker) ಎಂದು ಸಂದೇಶ ಕಳುಹಿಸಬೇಕು. ಅನಂತರ, ವಾಟ್ಸ್‌ಆ್ಯಪ್‌ಗೆ 'ಕೋವಿನ್, ಡಿಜಿಲಾಕರ್' – ಅಗತ್ಯವಿರುವ ಸೇವೆಯನ್ನು ಆಯ್ಕೆ ಮಾಡುವಂತೆ ಸಂದೇಶ ಬರುತ್ತದೆ. ಆಯ್ಕೆಗೆ ತಕ್ಕಂತೆ ಚಾಟ್‌ಬಾಟ್ ಸಂದೇಶ ಪ್ರತಿಕ್ರಿಯೆಗಳನ್ನು ನೀಡುತ್ತದೆ. ಇದಕ್ಕೂ ಮೊದಲು ಡಿಜಿಲಾಕರ್‌ಗೆ ನೀವು ಲಾಗಿನ್ ಆಗಿ ಹೆಸರು ನೋಂದಾಯಿಸಿಕೊಂಡಿರಬೇಕು.

ಡಿಜಿಲಾಕರ್‌ನ ಬಳಕೆಗೆ ವಾಟ್ಸ್‌ಆ್ಯಪ್‌ನಲ್ಲಿ ಆಧಾರ್ ಸಂಖ್ಯೆ ಕೇಳುತ್ತದೆ. ಅದರಂತೆ ನೋಂದಾಯಿತ ಮೊಬೈಲ್ ಸಂಖ್ಯೆಗೆ ಒಟಿಪಿ ರವಾನೆಯಾಗುತ್ತದೆ. ಕೋವಿಡ್ ಲಸಿಕೆ, ಚಿಕಿತ್ಸೆ, ಲಸಿಕೆ ಪ್ರಮಾಣಪತ್ರ ಸೇರಿದಂತೆ 'ಕೋವಿನ್' ಸಂಬಂಧಿತ ಸೇವೆಗಳು ಹಾಗೂ ವೈಯಕ್ತಿಕ ದಾಖಲಾತಿಗಳನ್ನು ಪಡೆಯಲು ಒಟಿಪಿ ನಮೂದಿಸಬೇಕಾಗುತ್ತದೆ. ಈ ಬಗ್ಗೆ ಮಾತನಾಡಿರುವ ಮೈಗೌ ಕಾರ್ಯನಿರ್ವಹಣಾಧಿಕಾರಿ ಅಭಿಷೇಕ್ ಸಿಂಗ್, 'ಈಗಾಗಲೇ 10 ಕೋಟಿಗೂ ಹೆಚ್ಚು ಜನರು ಡಿಜಿಲಾಕರ್ ಸೇವೆಗಳಿಗೆ ನೋಂದಾಯಿಸಿಕೊಂಡಿದ್ದು, 500 ಕೋಟಿಗೂ ಅಧಿಕ ದಾಖಲೆಗಳನ್ನು ಸಂಗ್ರಹಿಸಿಡಲಾಗಿದೆ' ಎಂದಿದ್ದಾರೆ.

### ಆಧಾರ್ ಜೋಡಣಾ ವಿಧಾನ

- ಡಿಜಿಲಾಕರ್ ಆ್ಯಪ್ ಅಥವಾ ವೆಬ್‌ಸೈಟ್‌ಗೆ ಲಾಗ್ ಇನ್ ಆಗಬೇಕು
- ಡ್ಯಾಶ್‌ಬೋರ್ಡ್‌ನಲ್ಲಿ ಕಾಣುವ ಆಧಾರ್ ಸಂಖ್ಯೆ ಜೋಡಣೆಯ ಆಯ್ಕೆಯನ್ನು ಕ್ಲಿಕ್ ಮಾಡಿ, ಆಧಾರ್ ಸಂಖ್ಯೆಯನ್ನು ನಮೂದಿಸಿ ಚೆಕ್‌ಬಾಕ್ಸ್ ಆಯ್ದುಕೊಳ್ಳಬೇಕು.
- 'ಲಿಂಕ್ ನೌ' ಆಯ್ಕೆಯನ್ನು ಕ್ಲಿಕ್ಕಿಸಬೇಕು.
- ನಂತರ ನಿಮ್ಮ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ಅದನ್ನು ನಮೂದಿಸಬೇಕು.
- ಅದಾದ ನಂತರ 'ವೆರಿಫೈ' ಆಯ್ಕೆಯನ್ನು ಕ್ಲಿಕ್ಕಿಸಬೇಕು

ಆಧಾರ್ ಕಾರ್ಡ್‌ಗೆ ಮೊಬೈಲ್ ಸಂಖ್ಯೆ ಜೋಡಣೆ ಆಗದಿದ್ದರೆ ಆಧಾರ್ ಸಂಖ್ಯೆಯನ್ನು ಡಿಜಿಲಾಕರ್ ಜೊತೆಗೆ ಲಿಂಕ್ ಮಾಡುವುದಕ್ಕೆ ಸಾಧ್ಯವಿಲ್ಲ. ■